ದಿನಾಂಕಃ 16-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ಆಪಾದಿತನ ಪರ ಶ್ರೀ. ಸಿ.ವಿ.ಪಿ. ವಕೀಲರಿಂದಃ</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಆಪಾದಿತ ನನಗೆ 8 ವರ್ಷಗಳಿಂದ ಪರಿಚಯಸ್ಥ. ಆಪಾದಿತ ನನ್ನಿಂದ ರೂ.3,00,000/- ಹಣವನ್ನು ಸಾಲವಾಗಿ ಕೇಳಿದ್ದ. ನಾನು ಆಪಾನಿತನಿಗೆ ಸಾಲ ನೀಡಿದ ಸಮಯದಲ್ಲಿ ನನ್ನ ಪತ್ನಿ ಇದ್ದರು. ನನ್ನ ಪತ್ನಿ ಹಾಜರು ಇರುವ ಬಗ್ಗೆ ನನ್ನ ದೂರಿನಲ್ಲಿ, ನೋಟಿಸ್ ನಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಪತ್ನಿ ಹಾಜರು ಇದ್ದ ವಿಷಯವನ್ನು ದೂರಿನಲ್ಲಿ, ನೋಟಿಸ್ ನಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಹಣ ಕೊಡುವ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ಹೆಂಡತಿ ನನ್ನನ್ನು ಬೈದ ಕಾರಣ ನನ್ನ ಹೆಂಡತಿ ಹಾಜರು ಇರುವ ಬಗ್ಗೆ ನಾನು ನಮೂದಿಸಿರುವುದಿಲ್ಲ.

ಆಪಾದಿತ ನನ್ನ ಸ್ನೇಹಿತ ಎಂದು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆಪಾದಿತ ಲೈನ್ ಮನ್ ಆಗಿರುರುತ್ತಾರೆ. ನಿಪಿ-1 ರಲ್ಲಿ ಎರಡು ಶಾಹಿಗಳ ಬರವಣಿಗೆ ಇದೆ ಎಂದರೆ ಸಾಕ್ಷಿಯು ಆಪಾದಿತ ನಿಪಿ-1 ನ್ನು ತುಂಬಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆಪಾದಿತ ಹಾಗೂ ನನ್ನ ನಡುವೆ ಯಾವುದೇ ನಿಪಿ-1 ನ್ನು ಹೊರತುಪಡಿಸಿ ಬೇರೆ ಕರಾರು ಇರುವುದಿಲ್ಲ. ಆಪಾದಿತನನಿಗೆ ನಗದು ರೂಪದಲ್ಲಿ ಸಾಲ ನೀಡಿದ್ದೆ. ಆಪಾದಿತನಿಗೆ ಆನ್ ಲೈನ್ ಅಥವಾ ಫೋನ್ ಪೇ ಮೂಲಕ ಹಣ ನೀಡಬಹುದಿತ್ತು ಎಂದರೆ ಸಾಕ್ಷಿಯು ತನ್ನ ಬಳಿ ಫೋನ್ ಪೇ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ರೂ.500/- ಮುಖ ಬೆಲೆಯ ನೋಟುಗಳ ಮುಖಾಂತರ ಆಪಾದಿತನಿಗೆ ಹಣವನ್ನು ನೀಡಿದ್ದೆ. ನಾನು ಬಾಳೆ ತೋಟದ ಬೆಳೆಯಿಂದ ಬಂದಂತಹ ಆದಾಯದಿ ಮುಖಾಂತರ ಆಪಾದಿತನಿಗೆ ಸಾಲ ನೀಡಿದ್ದೆ. ಅದಕ್ಕೆ ಸಂಬಂಧಪಟ್ಟತೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

**(ಆಪಾದಿತನ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು